ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಅಧ್ಯಕ್ಷರೆ. ಅಂತಹವರನ್ನು ಖಾಯಂ ಮಾಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು :— ಮಾನ್ಯ ಆರಗ ಜ್ಞಾನೇಂದ್ರರವರೆ, ಮಾನ್ಯ ಆರೋಗ್ಯ ಮಂತ್ರಿಗಳು ನನ್ನ ಅನುಮತಿಯನ್ನು ಪಡೆದು ಹೋಗಿರುವುದರಿಂದ, ತಾವು ಅವರು ಇದ್ದಾಗ ಪ್ರಸ್ತಾಪ ಮಾಡುತ್ತೀರೇನು?

(ಎ) ತೀರ್ಥಹಳ್ಳಿ ಕ್ಷೇತ್ರದ ಸರ್ಕಾರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯ ಪ್ರಸೂತಿ ತಜ್ಞರನ್ನು ನೇಮಿಸುವುದು.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿರುವ ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಯ ಮೂರ್ನಾಲ್ಕು ತಾಲ್ಲೂಕುಗಳ ವ್ಯಾಪ್ತಿಯನ್ನು ಹೊಂದಿದೆ. ಇವತ್ತು ಅಲ್ಲಿ ಪ್ರಸೂತಿ ವಿಭಾಗವಿಲ್ಲವೆಂದು ವಿವಿಧ ಮಹಿಳಾ ಸಂಘಟನೆಗಳು ಧರಣಿಸತ್ಯಾಗ್ರಹ ಮಾಡಿದ್ದಾರೆ. ನರ್ಸಿಂಗ್ ಹೋಂಗೆ ಹೋಗಿ ಪ್ರಸೂತಿಯಾಗಿ ಅಲ್ಲಿ ಹಣ ಪಾವತಿ ಮಾಡುವುದಕ್ಕಾಗದೆ ಮಾಂಗಲ್ಯ ಸರವನ್ನು ಅಡವಿಟ್ಟಿದ್ದಾರೆ. ಇಂತಹ ಪರಿಸ್ಥಿತಿ ಅಲ್ಲಿರುವಾಗ, ಅಲ್ಲಿಗೆ ಒಬ್ಬ ಪ್ರಸೂತಿ ತಜ್ಞರನ್ನು ಎರಡು ವರ್ಷಗಳಿಂದ ಈ ಸರ್ಕಾರ ಅಲ್ಲಿಗೆ ಹಾಕುತ್ತಿಲ್ಲ. ಐದು ಜನರನ್ನು ಪೋಸ್ಟಿಂಗ್ ಮಾಡಿದರು, ಅದರಲ್ಲಿ ಒಬ್ಬ ನಾನು ಊರಿಗೆ ಹೋಗುವುದರೊಳಗಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ.

ಅಧ್ಯಕ್ಷರು :— ಮಹಿಳಾ ವೈದ್ಯರನ್ನು ಹಳ್ಳಿಯಲ್ಲಿರುವ ಆಸ್ಪತ್ರೆಗಳಿಗೆ ಪೋಸ್ಟಿಂಗ್ ಮಾಡಿದರೆ, ಅವರಿಗೆ ಅಲ್ಲಿ ಹೋಗಿ ಕರ್ತವ್ಯ ನಿರ್ವಹಿಸಿದರೆ ಅದೇನೊ ರೋಗ ಬರುತ್ತದೆಯಂತೆ, ಅದಕ್ಕೆ ಅವರು ಹೋಗುವುದಿಲ್ಲ; ಅವರು ಇಲ್ಲೇ ಸಾಯುತ್ತಿದ್ದಾರೆ. ನಾನು ಸಭಾಧ್ಯಕ್ಷನಾಗಿ ಹೇಳುತ್ತಿರುವ ಪದಗಳನ್ನು ಗಮನಿಸಿ, ಅವರು ಹಳ್ಳಿಗೆ ಹೋದರೆ ಅದೇನೊ ರೋಗ ಬಂದು ಸತ್ತು ಹೋಗುತ್ತಾರೆ, ಅದಕ್ಕೆ ಶಾಸಕರ ಭವನದ ಹತ್ತಿರ, ನಮ್ಮ ಮನೆಗಳ ಹತ್ತಿರ ಇಲ್ಲೇ ಅವರು ಸಾಯುತ್ತಾರೆ, ಪೋಸ್ಟಿಂಗ್ಸ್ ಮಾಡಿದರೂ ಅವರು ಹೋಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ :— ಸರ್, ಅವರು ಸಾಯುವುದಕ್ಕೆ, ಇವರು ಸಹಾಯ ಮಾಡುತ್ತಿದ್ದಾರಲ್ಲ, ಇವರು ಜನರ ಪೋಸ್ಟಿಂಗ್ಸ್ ಆರ್ಡರ್ ಅನ್ನು ಬದಲಾಯಿಸುತ್ತಾರೆ; ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಈ ರೀತಿ ಆಗುತ್ತಿರುವುದಕ್ಕೆ ಇವರಿಗೆ ನಾಚಿಕೆಯಾಗಬೇಕು.

ಅಧ್ಯಕ್ಷರು :— ಈ ಜಿಲ್ಲಾಧಿಕಾರಿಗಳಿಗೆ ವೈದ್ಯರನ್ನು ಆಯ್ಕೆ ಮಾಡಿ ಅಲ್ಲಿ ನೇಮಕಾತಿ ಮಾಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಶಿವಮೊಗ್ಗದಲ್ಲಿರುಮವನನ್ನು ಹೊಸನಗರಕ್ಕೆ ಹೋಗು ಎಂದರೆ ಹೋಗುವುದಿಲ್ಲ. ನಾವು ಜಿಲ್ಲಾಮಟ್ಟದಲ್ಲೇ ಎಲ್‌ಎಂಪಿ ಪ್ರಾರಂಭ ಮಾಡಿ ಅಲ್ಲೇ ವೈದ್ಯರನ್ನು ಹೋಗುವುದಕ್ಕೆ ಹೇಳುವುದು ಉತ್ತಮ; ಸುಮ್ಮನೆ

ಈ ವೈದ್ಯಕೀಯ ಕಾಲೇಜುಗಳು ಏನಿದ್ದಾವೆ ಇವೆಲ್ಲಾ ವ್ಯರ್ಥ. ಅವರು ಹಳ್ಳಿಗಳಿಗೆ ಸೇವೆ ಮಾಡಲು ಹೋಗುವುದಿಲ್ಲ, ಅವರು ಕಾಲೇಜಿನಲ್ಲಿ ಪ್ಯಾಂಟ್ ಕೋಟು ಹಾಕಿಕೊಂಡವರು ಹಳ್ಳಿಗೆ ಬಂದರೆ ಸತ್ತುಹೋಗುತ್ತಾರೆ, ಬರುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ :— ಬಹಳ ದುರ್ದೈವದ ಸಂಗತಿ ಎಂದರೆ, ನಾವು ಕ್ಷೇತ್ರಕ್ಕೆ ಹೋಗುವಂತಿಲ್ಲ, ಕಳೆದ ಎರಡು ವರ್ಷಗಳಿಂದ ಈ ವಿಷಯವನ್ನು ಈ ಸದನದಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ; ಮಾನ್ಯ ಮಂತ್ರಿಗಳ ಹತ್ತಿರ ಕೇಳಿದ್ದೇನೆ, ಇವರಿಗೇನು ಅನ್ನಿಸುವುದಿಲ್ಲ; ಯಾರಾದರೂ ಪ್ರಭಾವ ಬೀರುವುದಕ್ಕೆ ಬಂದರೆ ಅವರನ್ನು ಬೆಂಗಳೂರಿನಲ್ಲೇ ಕುಳ್ಳಿರಿಸಿ ಆದೇಶ ಕೊಡುತ್ತಾರೆ.

ಅಧ್ಯಕ್ಷರು :— ಮಾನ್ಯ ಆರಗ ಜ್ಞಾನೇಂದ್ರರವರೆ, ತಾವು ಮತ್ತೆ ಅದನ್ನೆ ಹೇಳುತ್ತಿದ್ದೀರಿ, ವೈದ್ಯರನ್ನು ಪೋಸ್ಟಿಂಗ್ಸ್ ಮಾಡಿದರೆ ಅವರು ಹೋಗಿ ಕರ್ತವ್ಯಕ್ಕೆ ಹಾಜರಾಗುವುದಿಲ್ಲ; ಈಗ ಅವರನ್ನೆಲ್ಲಾ ಪೋಸ್ಟಿಂಗ್ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಯಾರು ಹೋಗುವುದಿಲ್ಲ ಅಂತಹವರ ಮೇಲೆ ಕ್ರಮ ಕೈಗೊಂಡು ಡಿಸ್‌ಮಿಸ್ ಅಥವಾ ಸಸ್ಪೆನ್ಷನ್ ಮಾಡಬೇಕು, ಈ ಸರ್ಕಾರ ಬದುಕಿದೆಯೋ ಅಥವಾ ಸತ್ತಿದೆಯೋ ಗೊತ್ತಿಲ್ಲ. ಅವರು ಪ್ರಭಾವ ಬೀರುತ್ತಾರೆಂದು ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ವರ್ಗಾವಣೆ ಮಾಡಿದರೆ ಸರ್ಕಾರ ಅಂತಹವರಿಗೆ ಸಹಾಯ ಮಾಡಿದಂತೆ ತಾನೆ.

ಅಧ್ಯಕ್ಷರು :— ಅವರನ್ನು ಡಿಸ್ ಮಿಸ್ ಮಾಡುವುದಕ್ಕೆ ಎಲ್ಲಾಗುತ್ತದಪ್ಪಾ ಪ್ರತಿಯೊಂದು ಜಾತಿ, ರಾಜಕೀಯಪಕ್ಷ, ನಾವು ನೀವು ಎಲ್ಲರೂ ಇದ್ದೇವಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಅವರು ಯಾವ ಜಾತಿಯವರನ್ನು ಎಲ್ಲಿಗೆ ಬೇಕಾದರೂ ಹಾಕಿಕೊಳ್ಳಲಿ, ಆ ಜಾತಿಗೆ ಸಂಬಂಧಪಟ್ಟವರನ್ನೆ ಅಲ್ಲಿಗೆ ತಂದು ಹಾಕಲಿ, ನಾವು ಜಾತಿಯನ್ನು ಚಿಂತಿಸುವುದಿಲ್ಲ.

ಅಧ್ಯಕ್ಷರು :— ಅಷ್ಟು ಸುಲಭದಲ್ಲಿ ಡಿಸ್‌ಮಿಸ್ ಮಾಡುವುದಕ್ಕಾಗುತ್ತದೆಯೇ? ಯಾರಾದರೂ ದಿಕ್ಕಿಲ್ಲದವನಿದ್ದರೆ ಅಂತಹವನನ್ನು ಡಿಸ್‌ಮಿಸ್ ಮಾಡಲಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ :— ಅವರು ಬರಲಿಲ್ಲವೆಂದರೆ ಎಂಬಿಬಿಎಸ್ ಮಾಡಿಕೊಂಡಿರುವವರು, ಪಿ.ಜಿ. ಮಾಡಿಕೊಂಡಿರುವವರು ಸೇವೆಯಲ್ಲಿರುವವರನ್ನಾದರೂ ಅಲ್ಲಿಗೆ ಹಾಕಬಹುದಲ್ಲ.

ಅಧ್ಯಕ್ಷರು :— ಶಾಸಕರ ಭವನದಲ್ಲಿರುವ ರೂಮ್ ಯಾವುದು, ನಮ್ಮ ಮನೆಗಳ

ಹತ್ತಿರವಿರುವ ಜನರ್ಯಾರು, ಅವರೆಲ್ಲಾ ಅವರೇ.

ಶ್ರೀ ಆರಗ ಜ್ಞಾನೇಂದ್ರ :— ಇವರಿಗೆ ಒಂದು ಪದ್ಧತಿ ಬೇಕಲ್ಲ, ಮಾನ್ಯ ಗೋವಿಂದೇಗೌಡರು ನಾನು ಯಾರನ್ನೂ ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿದರು, ಈ ಬದ್ಧತೆಯಿಂದ ನಮ್ಮ ಹತ್ತಿರ ಯಾವ ಶಿಕ್ಷಕರು ಹುಡುಕಿಕೊಂಡು ಬರುವುದಿಲ್ಲ, ಹಾಗೆ ಒಬ್ಬ ಆರೋಗ್ಯ ಸಚಿವರು ಏತಕ್ಕೆ ಮಾಡುವುದಿಲ್ಲವೆಂದು ನಾನು ಕೇಳುವುದು. ಅವರ ಸೇವೆ ಬಡವರಿಗೆ ಸಿಗಬೇಕಲ್ಲ, ಇಲ್ಲದಿದ್ದರೆ ಏನು ಪ್ರಯೋಜನ.

ಅಧ್ಯಕ್ಷರು :— ಮಾನ್ಯ ಮಂತ್ರಿಗಳು ಈ ಸಭೆಗೆ ಬಂದಾಗ ಸ್ವಲ್ಪ ಜೋರಾಗಿ ಮಾತನಾಡಿ, ತಮಗೆ ಅವರಿಂದ ಉತ್ತರವನ್ನು ಕೊಡಿಸುತ್ತೇನೆ, ಮಾನ್ಯ ಚಂದ್ರಶೇಖರ ನಾಯಕ್‌ರವರೆ ನೀವು ಮಾತನಾಡಿ.

(ಏ) ವಿಷಯ ಗೋಕಾಕ್ ತಾಲ್ಲೂಕಿನ ಮಣ್ಣೂರು ಗ್ರಾಮದಲ್ಲಿ ವಿದ್ಯುತ್ ತಂತಿ ಕಟ್ಟಾಗಿ ಕಳಚಿಕೊಂಡು ಕೆಳಗೆ ಬಿದ್ದು, ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಯುವಕ ಮತ್ತು ಯುವತಿ ಮೃತಪಟ್ಟಿರುವುದು.

ಶ್ರೀ ಚಂದ್ರಶೇಖರ ಸದಾಶಿವನಾಯಕ್ (ಗೋಕಾಕ್) :— ಮಾನ್ಯ ಅಧ್ಯಕ್ಷರೆ, ದಿನಾಂಕ: 30-6-99 ರಂದು ಗೋಕಾಕ್ ತಾಲ್ಲೂಕಿನ ಮಣ್ಣೂರು ಗ್ರಾಮದಲ್ಲಿ ವಿದ್ಯುತ್ ತಂತಿ ಕಟ್ಟಾಗಿ ಕಳಚಿಕೊಂಡು ಕೆಳಗೆ ಬಿದ್ದು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಯುವಕ, ಯುವತಿ ಮೃತಪಟ್ಟಿದ್ದಾರೆ. ಆದರೆ ಆ ಯುವತಿಯ ಶವಸಂಸ್ಕಾರ ಮಾಡುವುದಕ್ಕೆ ಸಂಬಂಧಕರಿಗೆ ಗತಿಯಿಲ್ಲದಂಥ ಪರಿಸ್ಥಿತಿಯಲ್ಲಿ ವಿದ್ಯುತ್ ಇಲಾಖೆಯ ಹಿರಿಯ ಅಧಿಕಾರಿಗಳು ಬಂದು ನೋಡಿಕೊಂಡು ಹೋದರೂ ಇನ್ನು ಕೂಡ ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ. ಇದರಲ್ಲಿ ನಮ್ಮ ಇಲಾಖೆಯದು ತಪ್ಪಾಗಿದೆ ಅವರಿಗೆ ಪರಿಹಾರ ಕೊಡುತ್ತೇವೆಂದು ಹೇಳಿ ಹೋಗಿದ್ದಾರೆಯೇ ಹೊರತು ಆಕೆಯ ಶವಸಂಸ್ಕಾರ ಮಾಡುವುದಕ್ಕೂ ಕೂಡ ವ್ಯವಸ್ಥೆ ಮಾಡಲಿಲ್ಲ. ಕೊನೆಗೆ ಮುನಿಸಿಪಾಲಿಟಿಯವರಿಂದ ಆಕೆಯ ಶವಸಂಸ್ಕಾರ ಮಾಡುವಂತಹ ಪರಿಸ್ಥಿತಿ ಬಂತು. ಆದುದರಿಂದ ಆ ರೈತ ಕಾರ್ಮಿಕ ಕುಟುಂಬದವರಿಗೆ ಯುವಕ ಹಾಗೂ ಯುವತಿಗೆ ಸಂಬಂಧಿಗಳ ಪರಿಹಾರವನ್ನು ಆದಷ್ಟು ಬೇಗ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಇಂಧನ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ (ಮಾನ್ಯ ಇಂಧನ ರಾಜ್ಯ ಸಚಿವರು) :— ಆ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಇವತ್ತೆ ನಾನು ತರಿಸಿಕೊಂಡು, ಅವರಿಗೆ ತೊಂದರೆಯಾಗಿರುವುದಕ್ಕೆ ನಮ್ಮ ಇಲಾಖೆಯಿಂದ ಅವರಿಗೇನು ಪರಿಹಾರ ಕೊಡಬೇಕು ಅದನ್ನು ಬೇಗ ಕೊಡಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.